ದಿನಾಂಕ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಹೆಚ್.ಎಸ್ ವಕೀಲರಿಂದಃ**

ನಾನು ಸಾಕ್ಷಿಯನ್ನು ಎಲ್ಲಾ ಪ್ರತಿವಾದಿಗಳ ಪರವಾಗಿ ಹೇಳಲು ಬಂದಿರುತ್ತೇನೆ. ನಾನು ಎಲ್ಲಾರ ಪರವಾಗಿ ಸಾಕ್ಷಿಯನ್ನು ಹೇಳುತ್ತಿರುವ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ. ತಂಟೆಯ ಜಮೀನು ನನ್ನ ತಂದೆಯಾದ ಸಿದ್ದಪ್ಪ ಸೋಮಸಾಗರವರ ಹೆಸರಿನಲ್ಲಿ ಇರುತ್ತದೆ. ಆಸ್ತಿಗಳು ನನ್ನ ತಂದೆಯ ಹಿಸ್ಸೇಗೆ ನಮ್ಮ ಅಜ್ಜನಿಂದ ಬಂದಿರುತ್ತವೆ. ನನ್ನ ತಂದೆಯವರಿಗೆ ಬಸವಣ್ಣೆಪ್ಪ ಎಂಬುವವರು ಸಹೋದರ ಇರುತ್ತಾರೆ. ಸಿದ್ದಪ್ಪ ಹಾಗೂ ಬಸವಣ್ಣೆಪ್ಪ ರವರ ನಡುವೆ ಆದಂತಹ ವಿಭಾಗದಲ್ಲಿ ಬಂದಂತಹ ಆಸ್ತಿಗಳ ತಂಟೆಯ ಆಸ್ತಿ ನಮ್ಮ ತಂದೆಯ ಹಿಸ್ಸೇಗೆ ಬಂದಿರುತ್ತದೆ. ಬಸವಣ್ಣೆಪ್ಪ ಹಾಗೂ ಸಿದ್ದಪ್ಪರವರಲ್ಲಿ ವಿಭಾಗ ಸುಮಾರು 40-50 ವರ್ಷಗಳ ಹಿಂದೆ ಆಗಿರುತ್ತ ದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ, ನಾವು ಹುಟ್ಟುವ ಪೂರ್ವದಲ್ಲಿಯೇ ಅವರು ಬೇರೆಯಾಗಿರುತ್ತಾರೆ.

2. ಬಸವಣ್ಣೆಪ್ಪರವರ ಹಿಸ್ಸೇಗೆ ಬಂದಂತಹ ಆಸ್ತಿಗಳಲ್ಲಿ ನಾವು ಹಿಸ್ಸೇಯನ್ನು ಕೇಳಿರುವುದಿಲ್ಲ, ನಮ್ಮ ತಂದೆಯ ಹಿಸ್ಸೇಗೆ ಬಂದಂತಹ ಆಸ್ತಿಗಳಲ್ಲಿ ಮಾತ್ರ ಕೇಳಿರುತ್ತೇವೆ. ಶ್ರೀಮತಿ ನಿಂಗಮ್ಮ ರವರು ನನ್ನ ಅಕ್ಕ. ಅವರು ಮರಣ ಹೊಂದಿರುತ್ತಾರೆ ಹಾಗೂ ಅವರಿಗೆ ಮಕ್ಕಳು ಜನಿಸಿರುವುದಿಲ್ಲ. ಅವರ ಗಂಡ ಸಹ ಮರಣ ಹೊಂದಿರುತ್ತಾರೆ. ನಿಂಗಮ್ಮ ರವರಿಗೆ ಪಂಚಾಯಿತಿ ಆಸ್ತಿ ಸಂಃ 103/1 ಹಿಸ್ಸಾ ಆಗಿ ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ನನಗೆ ಆಸ್ತಿ ಸಂಃ 181/ಎ ಮನೆಯನ್ನು ಹಿಸ್ಸೇ ಆಗಿ ಕೊಟ್ಟಿರುತ್ತಾರೆ ಎಂದರೆ ಸರಿ. ವಾದಿ, 1, 2 ಮತ್ತು 5 ನೇ ಪ್ರತಿವಾದಿಗಳು ತಮ್ಮ ಹಿಸ್ಸೇಗೆ ಬಂದಂತಹ ಪಂಚಾಯಿತಿ ಆಸ್ತಿಗಳಲ್ಲಿ ಮನೆಯನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸವಿದ್ದಾರೆ. ಮುಂದುವರೆದು, ವಾದಿಯವರು

- 7 -

ತಮ್ಮ ಹಿಸ್ಸೇಯನ್ನು 5 ನೇ ಪ್ರತಿ ವಾದಿಯವರಿಗೆ ಕೊಟ್ಟು ಹಣವನ್ನು ಪಡೆದುಕೊಂಡಿರುತ್ತಾರೆ ಎನ್ನುತಾರೆ. ಈ ರೀತಿ ಸದರಿಯವರು ಬೇರೆ ಆಗಿ ಸುಮಾರು ವರ್ಷಗಳ ಆಗಿರುತ್ತವೆ ಎಂದರೆ ಹೆಚ್ಚಿಗೆ ಆಗಿರುತ್ತವೆ.

3. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವಂತೆ ಪಂಚಾಯಿತಿ ಆಸ್ತಿ ಸಂಃ 103/ ಎ 1 ನಮ್ಮ ಮನೆತನಕ್ಕೆ ಸಂಬಂದಿಸಿದಲ್ಲ, ಅದು ಅಸ್ತಿತ್ವದಲ್ಲಿ ಇರುವುದಿಲ್ಲ, ಅದೇ ರೀತಿ ಅದರ ಉತಾರವನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರಿಗೆ ಪಂಚಾಯಿತಿ ಆಸ್ತಿ ಸಂಃ 103/ಎ ಮಾತ್ರ ಇರುತ್ತದೆ, ಸ ನಂಃ 103/ಎ 1 ಇರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯವರು ಯಾವ ಯಾವ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂಬ ಬಗ್ಗೆ ನನಗೆ ಹೇಳಲು ನೆನಪಿಲ್ಲ. ಸದರಿ ದಾವೆಯಲ್ಲಿ ನಮ್ಮ ಮನೆತನಕ್ಕೆ ಸಂಬಂಧಿಸಿದ ಎಲ್ಲಾ ಆಸ್ತಿಗಳನ್ನು ವಾದಿಯವರು ಸೇರಿಸಿರುತ್ತಾರೆ.

4. ಶ್ರೀಮತಿ ಜಯಶೀಲರವರು ನನ್ನ ದೊಡ್ಡಪ್ಪ ಆದ ಬಸವಣ್ಣೆಪ್ಪ ರವರ ಮಗಳು ಎಂದೆ ಸರಿ. ಸ ನಂಃ 14/3 ರಲ್ಲಿ ಅರ್ಧಹಿಸ್ಸೇ ನಮ್ಮ ದೆಡ್ಡಪ್ಪ ಗೆ ಹಾಗೂ ಅರ್ಧ ಹಿಸ್ಸೇ ನಮ್ಮ ತಂದೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಉತಾರ ಇನ್ನೂವರೆಗೆ ಜಂಟಿಯಾಗಿದೆ ಎಂದರೆ ಸರಿ. 4 ನೇ ಪ್ರತಿವಾದಿಯರ ಮದುವೆ ಆಗುವ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. 4 ನೇ ಪ್ರತಿವಾದಿಯವರ ಮದುವೆ ಆಗುವ ಸಮಯದಲ್ಲಿ ಅವರ ಹಿಸ್ಸಾ ಬಾಬ್ತು ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪಂಚಾಯಿತಿ ಆಸ್ತಿಯನ್ನು ಹಿಸ್ಸಾ ಆಗಿ ಕೊಟ್ಟಿದ್ದರಿಂದ ಹಾಗೂ 4 ನೇ ಪ್ರತಿವಾದಿಯವರಿಗೆ ಹಿಸ್ಸಾ ಬಾಬ್ತು ಹಣ ಕೊಟ್ಟಿದ್ದರಿಂದ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ರೀತಿ ನಮಗೆ



ಹಿಸ್ಸಾ ಕೊಟ್ಟಿರುವ ಬಗ್ಗೆ ಯಾವುದೇ ಲಿಖಿತವಾಗಿ ದಾಖಲಾತಿಗಳನ್ನು ಮಾಡದೇ ಇರುವುದರಿಂದ ದುರುಪಯೋಗಪಡೆದುಕೊಂಡು ನಮಗೆ ಹಿಸ್ಸಾ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ನಾನು ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಸ್.ಎಂ.ಹೆಚ್ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ